**ಕರ್ನಾಟಕ ಸರ್ಕಾರ**

**ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ರವರು**

**ಹೊರಡಿಸಿದ ಕಛೇರಿ ನಡವಳಿಗಳು**

ವಿಷಯ: ಶ್ರೀ ಶತಶೃಂಗ ವಿದ್ಯಾಸಂಸ್ಥೆ, ಬೆಂಗಳೂರು ಇವರು ಕೋಲಾರ ಜಿಲ್ಲೆ ಬಂಗಾರಪೇಟೆಯಲ್ಲಿ ನಡೆಸುತ್ತಿರುವ ಕಿವುಡು ಮಕ್ಕಳ ವಸತಿಯುತ ಶಾಲೆಗೆ ಅಂಗವಿಕಲ ಮಕ್ಕಳ ಕೇಂದ್ರಿಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ 2014-15ನೇ ಸಾಲಿಗೆ ಅನುದಾನ ಮಂಜೂರು ಮಾಡಿ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ
1. ಸರ್ಕಾರದ ಆದೇಶ ಸಂಖ್ಯೆ:ಮಮಇ 109 ಪಿಹೆಚ್‌ಪಿ 2010 ದಿ: 14.12.10 ಹಾಗೂ ಸೇರ್ಪಡೆ ಆದೇಶ ದಿನಾಂಕ: 29.12.2010.
2. ಸರ್ಕಾರದಆದೇಶ ಸಂಖ್ಯೆ: ಮಮಇ/168/ಪಿಹೆಚ್‌ಪಿ/2012 ದಿ:28.06.2013
3. ಸರ್ಕಾರದ ಆದೇಶ ಸಂಖ್ಯೆ:ಮಮಇ/107/ಪಿಹೆಚ್‌ಪಿ/2014 ದಿ:25.6.14 ಮತ್ತು 23.07.14
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಮಅಇ ಇವರ ಪತ್ರ ಸಂಖ್ಯೆ ಮಮಇ: 01: ಪಿಹೆಚ್‌ಪಿ:2014 ದಿನಾಂಕ:04.01.2014
5. ಉಪನಿರ್ದೇಶಕರು, ಮಮಅಇ, ಕೋಲಾರ ಜಿಲ್ಲೆ ಇವರ ಪತ್ರದ ಸಂಖ್ಯೆ: ಜಿವಿ&ಹಿನಾಸಇಕೋ:ನಂ.ಅಂ.ಶೈಯೋಪ್ರ/01/2014-15/133 ದಿ: 29.9.2014
6. ಸರ್ಕಾರದ ಆದೇಶ ಸಂಖ್ಯೆ: ಮಮಇ 175 ಪಿಹೆಚ್‌ಪಿ 2014 ದಿನಾಂಕ: 3.9.2014

~*~*~*~*~*~

__ಪ್ರಸ್ತಾವನೆ:__ ಸರ್ಕಾರದ ಉಲ್ಲೇಖ(1)ರ ಆದೇಶದನ್ವಯ ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ವಿಶೇಷ ಶಾಲೆಗಳಿಗೆ ಅನುದಾನ ನೀಡಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರದ ಉಲ್ಲೇಖ (2)ರ ಆದೇಶದನ್ವಯ ಈ ಹಿಂದೆ ಕೇಂದ್ರ ಸರ್ಕಾರದ ಧನಸಹಾಯವನ್ನು ಪಡೆಯುತ್ತಿದ್ದ 68 ಶಾಲೆಗಳನ್ನು ಅಂಗವಿಕಲ ಮಕ್ಕಳ ಶಿಶುಕೇಂದ್ರೀಕೃತ ಯೋಜನೆಯಡಿ ರಾಜ್ಯ ಸರ್ಕಾರದಿಂದ ಧನ ಸಹಾಯವನ್ನು ನೀಡಲು ಆದೇಶಿಸಲಾಗಿದೆ. ಮುಂದುವರೆದು ಉಲ್ಲೇಖ (3)ರ ದಿನಾಂಕ:25.06.2014 ಮತ್ತು 23.07.2014ರ ಆದೇಶದಲ್ಲಿ ಪರಿಷ್ಕರಿಸಲಾಗಿದೆ.

ವಿಕಲಚೇತನ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ವಿಶೇಷ ಶಾಲೆಗಳಿಗೆ ಅನುದಾನ ನೀಡಲು ಶ್ರೀ ಶತಶೃಂಗ ವಿದ್ಯಾಸಂಸ್ಥೆಯಡಿಯಲ್ಲಿ ನಡೆಸುತ್ತಿರುವ ಶ್ರೀ ಸಾಯಿ ಶತಶೃಂಗ ಕಿವುಡು ಮಕ್ಕಳ ಉಚಿತ ವಸತಿಯುತ ಶಾಲೆಯ ಮುಖ್ಯಸ್ಥರು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ ಇವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಕೋಲಾರ ಜಿಲ್ಲೆ ಹಾಗೂ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ ಜಿಲ್ಲೆಯವರು ದಿನಾಂಕ:20.09.2014 ರಂದು ಶಾಲೆಗೆ ಭೇಟಿ ನೀಡಿ ತನಿಖೆ ಮಾಡಿ ಉಲ್ಲೇಖ (5)ರಲ್ಲಿ ವರದಿ ಸಲ್ಲಿಸಿರುವರು.

ಶ್ರೀ ಸಾಯಿ ಶತಶೃಂಗ ಕಿವುಡು ಮಕ್ಕಳ ಉಚಿತ ವಸತಿಯುತ ಶಾಲೆಯ ಎಲ್ಲಾ ರೀತಿಯ ಸೂಕ್ತ ಮೂಲಭೂತ ಸೌರ್ಕಯಗಳನ್ನು ಹೊಂದಿರುವ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು, ನುರಿತ ತರಬೇತಿ ಹಾಗೂ ಅನುಭವವುಳ್ಳ ಶಿಕ್ಷಕರನ್ನೊಳಗೊಂಡ ಕಿವುಡ ಮಕ್ಕಳ ಒಂದು ಮಾದರಿ ಶಾಲೆಯಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದು ಶಾಲೆಯನ್ನು ತೃಪ್ತಿಕರವಾಗಿ ನಡೆಸುತ್ತಿರುವುದರಿಂದ 2014-15ನೇ ಸಾಲಿಗೆ 62 ವಸತಿಯುತ ಮಕ್ಕಳಿಗೆ ರೂ.37,20,000/- ಹಾಗೂ 13 ವಸತಿರಹಿತ ಮಕ್ಕಳಿಗೆ ರೂ.6,24,000/- ಹೀಗೆ ಒಟ್ಟು ರೂ.43,44,000/-ಗಳ ಆಯವ್ಯಯವನ್ನು ಬಿಡುಗಡೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ ಜಿಲ್ಲೆಯವರು ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಕೋಲಾರ ಜಿಲ್ಲೆ ಇವರ ಶಿಫಾರಸ್ಸಿನನ್ವಯ ಸರ್ಕಾರದ ಆದೇಶದಲ್ಲಿನ ಮಾನದಂಡವನ್ನು ಪೂರೈಸುವ ಹಾಗೂ ಕೊರತೆ ಇರುವ ತರಬೇತಿ ಪಡೆದ ಶಿಕ್ಷಕರನ್ನು ಆದ್ಯತೆಯ ಮೇಲೆ ನೇಮಕಾತಿ ಮಾಡಿಕೊಳ್ಳುವ ಷರತ್ತಿನನ್ವಯ ಉಲ್ಲೇಖ (2)ರ ಸರ್ಕಾರದ ಆದೇಶದಂತೆ ತನಿಖಾ ದಿನದಂದು ಹಾಜರಿದ್ದ 54 ವಸತಿಸಹಿತ ಮಕ್ಕಳಿಗೆ 24 ದಿನಗಳಿಗೆ ರೂ.2500/- ರಂತೆ (54*24*2500) ರೂ.1.08,000/-ಗಳು ಹಾಗೂ 11 ವಸತಿರಹಿತ ಮಕ್ಕಳಿಗೆ 24 ದಿನಗಳಿಗೆ ರೂ.2000/- ರಂತೆ (11*24*2000) ರೂ.17,600/-ಗಳು ಹೀಗೆ ಒಟ್ಟು ರೂ. 1,25,600/- ಉಲ್ಲೇಖ (3)ರ ಸರ್ಕಾರದ ಆದೇಶದಂತೆ 54 ವಸತಿಸಹಿತ ಮಕ್ಕಳಿಗೆ ರೂ.5000/- ರಂತೆ 6 ದಿನಗಳಿಗೆ (54*6*5000) ರೂ.54,000/-ಗಳು ಹಾಗೂ 11 ವಸತಿರಹಿತ ಮಕ್ಕಳಿಗೆ ರೂ.4000/- ರಂತೆ (11*6*4000) ರೂ.8,800/-ಗಳು ಸೇರಿ ಒಟ್ಟು ರೂ.62,800/- ಹಾಗೂ 54 ವಸತಿಸಹಿತ ಮಕ್ಕಳಿಗೆ 9 ತಿಂಗಳಿಗೆ ರೂ.5000/- ರಂತೆ (54*9*5000) ರೂ.24,30,000/-ಗಳು ಹಾಗೂ 11 ವಸತಿರಹಿತ ಮಕ್ಕಳಿಗೆ 9 ತಿಂಗಳಿಗೆ ರೂ.4000/- ರಂತೆ (11*9*4000) ರೂ.3,96,000/- ಹೀಗೆ ಒಟ್ಟು ರೂ.28,26,000/- ಗಳು ಹೀಗೆ ಒಟ್ಟು ರೂ.30,14,400/-ಗಳನ್ನು ಮತ್ತು ಸಂಸ್ಥೆಯು ಬಾಡಿಗೆ ಕಟ್ಟಡದಲ್ಲಿ ಶಾಲೆಯನ್ನು ನಡೆಯುತ್ತಿದ್ದು, ಸದರಿ ಅವಧಿಯಲ್ಲಿ ಕಡಿಮೆ ಬಾಡಿಗೆ ಬಾಬ್ತು ರೂ.20,250/- ಗಳನ್ನು ಕಳೆದು (ರೂ.30,14,400 – 20,250/-) ಒಟ್ಟು ರೂ.29,94,150/- ಗಳನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. **"ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ"** ಯೋಜನೆಯಡಿ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಉಲ್ಲೇಖ(4)ರ ದಿನಾಂಕ:04.01.2014ರ ಪತ್ರದಲ್ಲಿ ಎಲ್ಲಾ ಮುಂದುವರೆದ ಯೋಜನೆಗಳ ಅನುದಾನ ಬಿಡುಗಡೆಯನ್ನು ನಿರ್ದೇಶಕರ ಹಂತದಲ್ಲಿ ಕ್ರಮವಹಿಸಲು ಸೂಚಿಸಿರುತ್ತಾರೆ

ಸಂಖ್ಯೆ: ಇಸಿ 10 ಬೆಂಗ್ರಾ ಶ.ಶ.ವಿ.ಸಂ/ ಅಂ.ಮ.ಶಿ.ಕೇಂಯೋ/2014-15 ದಿನಾಂಕ:06/11/2014

- 2 -

ಉಲ್ಲೇಖ 6ರ ಆದೇಶದಲ್ಲಿ ಯೋಜನೆಯಡಿ 2ನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಮಂಜೂರಾತಿ ನೀಡಿರುವುದರಿಂದ ರೂ.29,94,150/-ಗಳ ಅನುದಾನವನ್ನು ಮಂಜೂರು ಮಾಡಿ ಮೊದಲನೇ ಮತ್ತು ಎರಡನೇ ಕಂತಾಗಿ ರೂ.14,97,075/- ಗಳ ಅನುದಾನ ಮಂಜೂರು ಮಾಡಿ ಬಿಡುಗಡೆ ಮಾಡಲುದ್ದೇಶಿಸಿ ಈ ಕೆಳಕಂಡ ಆದೇಶ.

ವಿಕಲಚೇತನರ ಹಾಗೂ ಹಿರಿಯ
ನಾಗರಿಕರ ಸಬಲೀಕರಣ ನಿರ್ದೇಶನಾಲಯ,
ಪೋಡಿಯಂ ಬ್ಲಾಕ್, ವಿ.ವಿ. ಗೋಪುರ,
ಡಾ॥ ಬಿ.ಆರ್.ಅಂಬೇಡ್ಕರ್ ವೀದಿ
ಬೆಂಗಳೂರು-5600 01.

ಸಂಖ್ಯೆ: ಇಸಿ 10 ಬೆಂಗ್ರಾ ಶ.ಶ.ವಿ.ಸಂ/ ಅಂ.ಮ.ಶಿ.ಕೇಂಯೋ/2014-15 3803 ದಿನಾಂಕ:06/11/2014

**ಆ ದೇ ಶ**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳನ್ವಯ ಶ್ರೀ ಶತಶೃಂಗ ವಿದ್ಯಾಸಂಸ್ಥೆ, ಬೆಂಗಳೂರು ಇವರು ಕೋಲಾರ ಜಿಲ್ಲಯ ಬಂಗಾರಪೇಟೆಯಲ್ಲಿ ನಡೆಸುತ್ತಿರುವ ಶ್ರೀ ಸಾಯಿ ಶತಶೃಂಗ ಕಿವುಡು ಮಕ್ಕಳ ವಸತಿಯುತ ಶಾಲೆಯ ನಿರ್ವಹಣೆಗೆ ಶಿಶುಕೇಂದ್ರೀಕೃತ ಯೋಜನೆಯಡಿ 2014-15ನೇ ಸಾಲಿಗೆ ಅನ್ವಯವಾಗುವಂತೆ 54 ವಸತಿಸಹಿತ ಹಾಗೂ 11 ವಸತಿರಹಿತ ಮಕ್ಕಳಿಗನುಗುಣವಾಗಿ ರೂ.29,94,150/- ಗಳ (ರೂಪಾಯಿ ಇಪ್ಪತ್ತೊಂಬತ್ತು ಲಕ್ಷದ ತೊಂಬತ್ತ ನಾಲ್ಕು ಸಾವಿರದ ಒಂದು ನೂರ ಐವತ್ತು ಮಾತ್ರ) ಅನುದಾನ ಮಂಜೂರು ಮಾಡಿ, ಮೊದಲನೆ ಹಾಗೂ ಎರಡನೇ ತ್ರೈಮಾಸಿಕ ಕಂತಾಗಿ ರೂ.14,97,075/- ಗಳಿಗೆ (ರೂಪಾಯಿ ಹದಿನಾಲ್ಕು ಲಕ್ಷದ ತೊಂಬತ್ತೇಳು ಸಾವಿರದ ಎಪ್ಪತ್ತೈದು ಮಾತ್ರ)ಗಳ ಅನುದಾನವನ್ನು **"ಅಂಗವಿಕಲ ಮಕ್ಕಳ ಕೇಂದ್ರಿಕೃತ ವಿಶೇಷ ಶೈಕ್ಷಣಿಕ"** ಯೋಜನೆಯಡಿ ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಕೋಲಾರ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿದೆ. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ ಇವರು ಅನುದಾನದ ಬಿಲ್ಲಿಗೆ ಮೇಲು ಸಹಿ ಮಾಡಲು ಸೂಚಿಸಲಾಗಿದೆ.

ಸದರಿ ಅನುದಾನವನ್ನು "ಅಂಗವಿಕಲ ಮಕ್ಕಳ ಕೇಂದ್ರಿಕೃತ ವಿಶೇಷ ಶೈಕ್ಷಣಿಕ" ಯೋಜನೆಯಡಿ ರಾಜ್ಯ ಅನುದಾನಕ್ಕೆ 2014-15ನೇ ಸಾಲಿನ ಲೆಕ್ಕಶೀರ್ಷಿಕೆ 2235-02-800-0-04 ಯೋಜನೆ ಉಪಲೆಕ್ಕಶೀರ್ಷಿಕೆ 101 ಸಹಾಯಧನದಡಿ ಒದಗಿಸಿರುವ ರೂ.4239.65 ಲಕ್ಷ ಆಯವ್ಯಯದಲ್ಲಿ ಸಂಸ್ಥೆಗೆ 2014-15ನೇ ಸಾಲಿಗೆ ರೂ.14,97,075/- ಗಳ ಅನುದಾನವನ್ನು ಭರಿಸತಕ್ಕದ್ದು.

**ಷರತ್ತುಗಳು**

- ಸರ್ಕಾರದ ಆದೇಶ ಸಂಖ್ಯೆ: ಮಮಇ 109 ಪಿಹೆಚ್‌ಪಿ 2010 ದಿನಾಂಕ:14.12.2010ಕ್ಕೆ ದಿನಾಂಕ: 29.12.2012 ರಂದು ಹೊರಡಿಸಿರುವ ಸೇರ್ಪಡೆ ಆದೇಶದ ಹಾಗೂ ಮಮಇ/107/ಪಿಹೆಚ್‌ಪಿ/2014 ದಿ:25.06.2014 ಮತ್ತು 23.07.2014 ರಲ್ಲಿನ ಆದೇಶದ ಅನುಬಂಧಗಳಲ್ಲಿ ನಿಗದಿಪಡಿಸಿದ ಐಟಂವಾರು ವೆಚ್ಚಗಳನ್ನು ಭರಿಸಿ ಉಪಯೋಗಿತಾ ಪ್ರಮಾಣ ಪತ್ರವನ್ನು ನೀಡತಕ್ಕದ್ದು. ಒಂದು ವೇಳೆ ಅನುಬಂಧ 1ರಲ್ಲಿ ನಿಗದಿಪಡಿಸುವಂತೆ ಐಟಂವಾರು ವೆಚ್ಚಗಳನ್ನು ಭರಿಸದೇ ಬೇರೆ ಉದ್ದೇಶಕ್ಕೆ ಬಳಸಿದ್ದಲ್ಲಿ ಅಂತಹ ಮೊತ್ತವನ್ನು ಸಂಸ್ಥೆಯಿಂದ ವಸೂಲು ಮಾಡಿ ಸರ್ಕಾರಕ್ಕೆ ಜಮಾ ಮಾಡತಕ್ಕದ್ದು. ಹಾಗೂ ಸರ್ಕಾರದ ಆದೇಶಗಳಲ್ಲಿನ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

- ಮೇಲಿನ ಆದೇಶದಂತೆ ಶಿಕ್ಷಕ / ಶಿಕ್ಷಕೇತರರಿಗೆ ನಿಗದಿಪಡಿಸಲಾಗಿರುವಂತೆ ಗೌರವಧನವನ್ನು ನೀಡಲು ಹಾಗೂ ಗೌರವಧನದ ಮೊತ್ತವನ್ನು ಸಂಸ್ಥೆಯು ಚೆಕ್‌ಮೂಲಕ ಕಡ್ಡಾಯವಾಗಿ ಪಾವತಿಸಿ ಸಂಬಂಧಪಟ್ಟ ಸಿಬ್ಬಂದಿಗಳ ಬ್ಯಾಂಕ್‌ಖಾತೆಗೆ ಜಮಾ ಮಾಡತಕ್ಕದ್ದು.

- ತರಬೇತಿ ಪಡೆಯದೇ ಇರುವ ಶಿಕ್ಷಕರನ್ನು ತಪ್ಪದೇ ತರಬೇತಿಗೆ ನಿಯೋಜಿಸತಕ್ಕದ್ದು.

- ಯೋಜನೆಯ ನಿಯಮಾನುಸಾರ ವಿಶೇಷ ಶಾಲೆಯನ್ನು ನಡೆಸದೇ ಇರುವುದು ಕಂಡು ಬಂದಲ್ಲಿ ಸಂಸ್ಥೆಗೆ ವಿಶೇಷ ಶಾಲೆಯನ್ನು ನಡೆಸಲು ನೀಡಿರುವ ಅನುಮತಿ ಹಿಂಪಡೆಯಲು ಹಾಗೂ ಬಿಡುಗಡೆ ಮಾಡಿರುವ ಆಯವ್ಯಯವನ್ನು ವಸೂಲು ಮಾಡಲು ವರದಿಯನ್ನು ತಪ್ಪದೇ ಸಲ್ಲಿಸತಕ್ಕದ್ದು.
- ಕಾಲಕಾಲಕ್ಕೆ ಸರ್ಕಾರ ಹಾಗೂ ಇಲಾಖೆಯು ಹೊರಡಿಸುವ ಆದೇಶಗಳನ್ನು ಚಾಚು ತಪ್ಪದೇ ಪಾಲಿಸತಕ್ಕದ್ದು. ತಪ್ಪಿದಲ್ಲಿ ನಿಯಮಾನುಸಾರ ಯಾವುದೇ ಸೂಚನೆ ನೀಡದೇ ಅನುಮತಿ ಮತ್ತು ಅನುದಾನವನ್ನು ಹಿಂದಕ್ಕೆ ಪಡೆಯಲಾಗುವುದು.

6/11/14

ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ, ಬೆಂಗಳೂರು.

ಗೆ,

ಅಧ್ಯಕ್ಷರು/ಕಾರ್ಯದರ್ಶಿಗಳು, ಶ್ರೀ ಶತಶೃಂಗ ವಿದ್ಯಾಸಂಸ್ಥೆ (ರಿ), ಶಿರಡಿ ಸಾಯಿಮಂದಿರ, ಚೆಕ್‌ಪೋಸ್ಟ್ ಹತ್ತಿರ, 2ನೇ ಹಂತ, ಮಾಗಡಿ ಮುಖ್ಯರಸ್ತೆ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಸರ್ಕಾರದ ಮಾನದಂಡಗಳನ್ನು ಸಂಪೂರ್ಣವಾಗಿ ಪೂರೈಸಿರುವ ದೃಢೀಕರಣವನ್ನು ಹಾಗೂ ಅನುದಾನದ ಬಿಲ್ಲನ್ನು ಜಿಲ್ಲೆಯ ಅಂಗವಿಕಲರ ಕಲ್ಯಾಣ ಅಧಿಕಾರಿಗಳಿಗೆ ಸಲ್ಲಿಸಲು ಸೂಚಿಸಲಾಗಿದೆ.

**ಪ್ರತಿಯನ್ನು:**

1. ಜಿಲ್ಲಾ ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆ, ಕೋಲಾರ, ಇವರ ಮಾಹಿತಿಗಾಗಿ
2. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಛೇರಿ, ಕೋಲಾರ, ಇವರ ಮಾಹಿತಿಗಾಗಿ ಹಾಗೂ ಅನುದಾನದ ಬಿಲ್ಲಿಗೆ ಮೇಲುಸಹಿ ಮಾಡತಕ್ಕದ್ದು.
3. ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಛೇರಿ, ಕೋಲಾರ, ಇವರ ಮಾಹಿತಿಗಾಗಿ ಹಾಗೂ ಸಂಸ್ಥೆಯವರಿಂದ ನಿಯಮಾನುಸಾರ ಷರತ್ತುಗಳ ಮುಚ್ಚಳಿಕೆಯನ್ನು ಹಾಗೂ ಕೊರತೆ ಇರುವ ತರಬೇತಿ ಹೊಂದಿದ ಶಿಕ್ಷಕರನ್ನು ನೇಮಕಾತಿಗೊಳಿಸುವ ಮತ್ತು ಸರ್ಕಾರದ ಮಾನದಂಡಗಳನ್ನು ಸಂಪೂರ್ಣವಾಗಿ ಪೂರೈಸಿರುವ ಬಗ್ಗೆ ದೃಢೀಕರಣವನ್ನು ಪಡೆಯತಕ್ಕದ್ದು. ಮತ್ತು ವಿಶೇಷ ಶಾಲೆಯ ಸಮರ್ಪಕ ನಿರ್ವಹಣೆಯ ಬಗ್ಗೆ ಪರಿಶೀಲಿಸಿ ನಿರ್ದೇಶನಾಯಲಕ್ಕೆ ತಪ್ಪದೇ ವರದಿ ಸಲ್ಲಿಸತಕ್ಕದ್ದು.
4. ಅಯವ್ಯಯ / ಅನುದಾನ ವಿಭಾಗ, ಪ್ರಧಾನ ಕಛೇರಿ, ಬೆಂಗಳೂರು ಇವರ ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
5. ಉಪ ನಿರ್ದೇಶಕರು, ಖಜಾನೆ ಗಣಕಜಾಲ, ಖನಿಜ ಭವನ, ಬೆಂಗಳೂರು.
6. ಲೆಕ್ಕ ಅಧೀಕ್ಷಕರು, ಪ್ರದಾನ ಕಛೇರಿ, ಬೆಂಗಳೂರು.
7. ವೆಬ್‌ಸೈಟ್ ವಿಭಾಗ, ಪ್ರಧಾನ ಕಛೇರಿ, ಬೆಂಗಳೂರು ಇವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ
8. ಕಛೇರಿ ಪ್ರತಿ.
9. ಹೆಚ್ಚುವರಿ ಪ್ರತಿ.